ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಪಿಂಚಣಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 25/09/201

# ಸರಕಾರಿ ನೌಕರರ ಪಿಂಚಣಿ ನಿಯಮದಲ್ಲಿ ತಿದ್ದುಪಡಿ

**ಹೊಸದಿಲ್ಲಿ:** ಸರಕಾರಿ ನೌಕರ ಪಿಂಚಣಿ ನಿಯಮದಲ್ಲಿ ಸರಕಾರವು ಮಹತ್ವದ ತಿದ್ದುಪಡಿ ಮಾಡಿದೆ. ಏಳು ವರ್ಷಗಳ ಸೇವಾವಧಿಯು ಅಂತ್ಯವಾಗುವ ಮುನ್ನವೇ ನೌಕರನು ಮೃತಪಟ್ಟರೆ, ಅವರ ಕುಟುಂಬಕ್ಕೆ 10 ವರ್ಷಗಳ ಕಾಲ ನೌಕರನ ಕಡೆಯ ವೇತನದ ಶೇ 50ರಷ್ಟು ಮೊತ್ತವು ಪಿಂಚಣಿಯಾಗಿ ದೊರೆಯಲಿದೆ.

ಕೇಂದ್ರ ನಾಗರಿಕ ಸೇವೆ (ಪಿಂಚಣಿ) ನಿಯಮಗಳು 1972ಕ್ಕೆ ಸರಕಾರ ತಿದ್ದುಪಡಿ ಮಾಡಿದ್ದು, ಅಕಾಲ ಮೃತ್ಯ ಸಂದರ್ಭದಲ್ಲಿ ನೌಕರರ ಕುಟುಂಬಕ್ಕೆ ನೆರವಾಗಲು ಈ ಪರಿಷ್ಕರಣೆ ಕೈಗೊಳ್ಳಲಾಗಿದೆ. ಇದುವರೆಗೂ ಇಂಥ ಪ್ರಕರಣಗಳಲ್ಲಿ ಪಿಂಚಣಿಯಾಗಿ ಶೇ. 30ರಷ್ಟು ಮೊತ್ತವನ್ನು ಮಾತ್ರ ನೀಡಲಾಗುತ್ತಿತ್ತು. ಏಳು ವರ್ಷ ಕಾಲ ಸೇವೆ ಮುಗಿದಿದ್ದರೆ ಮಾತ್ರ ಶೇ 50ರಷ್ಟು ಸಿಗುತ್ತಿತ್ತು. ಪರಿಷ್ಕೃತ ಆದೇಶ ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ.

7